**ಸಿಸಿ 1052/2021, CW-30, PW-6**

<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ</u>

ಸಿಸಿ 1052/2021

| | | |
|---|---|---|
| ಸಾಕ್ಷಿಯ ಹೆಸರು: | ಪ್ರದೀಪ ಬಿ.ಆರ್. | ಪ್ರಾಸಾ: 6 |
| ತಂದೆ ಹೆಸರು: | ರಾಜೇಗೌಡ | ಚಾಸಾ: 30 |
| ವಯಸ್ಸು: | 46 ವರ್ಷ | ಪ್ರಮಾಣೀಕರಿಸಿದ ದಿ: 23.07.2025 |
| ಉದ್ಯೋಗ: | ವೃತ್ತ ನಿರೀಕ್ಷಕರು, ಹೊಳೆ ನರಸೀಪುರ | |
| ವಾಸಸ್ಥಳ: | ಹೊಳೆ ನರಸೀಪುರ | |

<u>ಮುಖ್ಯ ವಿಚಾರಣೆ: ಸಸಅ ರಿಂದ:</u>

ನಾನು 17.03.2018 ರಿಂದ ದಿ: 01.06.2018 ಮತ್ತು 01.10.2018 ರಿಂದ 15.07.2021 ರ ವರೆಗೆ ಪಿರಿಯಾಪಟ್ಟಣ ಪೊಲೀಸ್ ವೃತ್ತದಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿ: 27.08.2019 ಈ ಕಡತವನ್ನು ಚಾಸಾ-29 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ.
2. ದಿ: 27.08.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ, ಪಂಚರಾದ ಚಾಸಾ.**3, 7** ಮತ್ತು **8** ರವರ ಸಮಕ್ಷಮ ಮಹಜರ್ ಕ್ರಮವನ್ನು ಬೆಳಿಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿರುತ್ತೇನೆ. ನಂತರ ಕೃತ್ಯದ ನಡೆದ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಕೆಎ-12-ಕ್ಯೂ-8551 ರ ನೋಂಣಿಯ ಡಿಸ್ಕವರಿ ನೋಂದಣಿಯ ಬೈಕನ್ನು ಚಾಸಾ. **9** ಮತ್ತು **10** ರವರ ಸಮಕ್ಷಮ ಅಮಾನತು ಪಡಿಸಿಕೊಂಡು, ಠಾಣಾ ಮುದ್ದೆಮಾಲು ಸಂ. 147/2019 ರಲ್ಲಿ ನೋಂದಣಿ ಮಾಡಿರುತ್ತೇನೆ. ಅದೇ ದಿನ ಪ್ರಕರಣದ ಚಾಸಾ.2, 4 ರಿಂದ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.
3. ದಿ: 30.10.2019 ರಂದು ಚಾಸಾ.**30** ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ.
4. ದಿ: 25.10.2019 ರಂದು ವೈದ್ಯರು ಸಂಗ್ರಹಿಸಿ ಕೊಟ್ಟ ಮೃತನಿಗೆ ಸಂಬಂದಿಸಿದ ರಕ್ತ ಮತ್ತು ಸಾಟಿಲೇಟೆಡ್ ಸೋಡಿಯಂ ಕ್ಲೋರೈಡ್ ಹಾಜರು ಪಡಿಸಿದ್ದು, ಅದನ್ನು ಠಾಣಾ ಮಾಲುಪಟ್ಟಿ ಸಂ. 171/2019 ರಲ್ಲಿ ನೋಂದಣಿ ಮಾಡಿರುತ್ತೇನೆ.
5. ದಿ: 25.10.2019 ರಂದು ಸದರಿ ಮುದ್ದೆಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಆರ್.ಎಫ್.ಎಸ್.ಎಲ್.ಗೆ ಕಳುಹಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ದಿ: 18.11.2019 ರಂದು ಆರ್.ಎಫ್.ಎಸ್.ಎಲ್. ವರದಿಯನ್ನು ಪಡೆದುಕೊಂಡಿರುತ್ತೇನೆ.

6. ದಿಃ 06.09.2019 ರಂದು ಮೃತನಿಗೆ ಸಂಬಂದಪಟ್ಟ ಜೆ.ಎಸ್.ಎಸ್. ಆಸ್ಪತ್ರೆಯ ವೈದ್ಯಕೀಯ ವರದಿಗಳನ್ನು ಪಡೆದುಕೊಂಡಿರುತ್ತೇನೆ.
7. ದಿಃ 17.10.2019 ರಂದು ಚಾಸಾ.2 ಮತ್ತು 3 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.
8. ದಿಃ 30.12.2019 ರಂದು ಆರ್.ಸಿ., ಮಾಲೀಕರು ನ್ಯಾಯಾಲಯದಿಂದ ಬಿಡುಗಡೆ ಪತ್ರವನ್ನು ತಂದಿದ್ದು, ಆರ್.ಸಿ., ಮಾಲೀಕರಿಗೆ ಕೆಎ-12-ಕ್ಯೂ-8551 ರ ಡಿಸ್ಕವರಿ ಮೋಟಾರ್ ಸೈಕಲ್ ನ್ನು ಬಿಡುಗಡೆ ಮಾಡಿರುತ್ತೇನೆ. ಆರ್.ಸಿ. ಮಾಲೀಕರಿಗೆ ನೋಟಿಸ್ ನ್ನು ಜಾರಿ, ಪ್ರತ್ಯುತ್ತರವನ್ನು ಪಡೆದುಕೊಂಡಿರುತ್ತೇನೆ.
9. ದಿಃ 12.06.2020 ರಂದು ಮೃತನ ಪಿ ಎಂ ವರದಿಯನ್ನು ಚಾಸಾ.19 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.
10. ದಿಃ 07.08.2020 ರಂದು ಚಾಸಾ. 23 ರಿಂದ 27, ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಗೆ ಕಲಂ 41(ಎ) ಅಡಿಯಲ್ಲಿ ನೋಟಿಸ್ ನ್ನು ಜಾರಿ ಮಾಡಿ, ಅವರಿಂದ ಉತ್ತರವನ್ನು ಪಡೆದುಕೊಂಡಿರುತ್ತೇನೆ.
11. ದಿಃ 08.08.2020 ರಂದು ಈ ಪ್ರಕರಣದ ಆರೋಪಿತ ಶಿವು ರವರನ್ನು ವಶಕ್ಕೆ ಪಡೆದುಕೊಂಡು, ಅವರನ್ನು ವಿಚಾರಣೆ ಮಾಡಿ, ಅವರು ಕೃತ್ಯವನ್ನು ಮಾಡಿದ್ದನ್ನು ಒಪ್ಪಿಕೊಂಡ ಮೇರೆಗೆ ಪ್ರಕರಣದ ಸಾಕ್ಷಿದಾರರಾದ ಚಾಸಾ. 2 ಮತ್ತು 3 ರವರನ್ನು ಕಚೇರಿಗೆ ಕರೆಸಿ, ಶಿವು ರವರು ತೋರಿಸಿದಾಗ, ಅವರು ಅಪಘಾತ ಮಾಡಿದ ವ್ಯಕ್ತಿಯು ಇವರೇ ಎಂದು ಗುರುತಿಸಿರುತ್ತಾರೆ. ಅದೇ ದಿನ ಆರೋಪಿತನಿಗೆ ಕಲಂ 133 ಐಎಂವಿ ಅಡಿಯಲ್ಲಿ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ.
12. ನಂತರ ಪ್ರಕರಣವು ಪೂರ್ಣಗೊಂಡಿದ್ದು, 2 ನೇ ಆರೋಪಿಯು 1 ನೇ ಆರೋಪಿಗೆ ಡಿ.ಎಲ್. ಇಲ್ಲದೇ ವಾಹನ ಚಲಾವಣೆ ಮಾಡಲು ವಾಹನ ನೀಡಿದ್ದರಿಂದ, 2 ನೇ ಆರೋಪಿಯ ಮೇಲೆ ವಿಮೆ ಪರಿಹಾರವನ್ನು ತಾನೇ ಕಟ್ಟಿಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ, 2 ನೇ ಆರೋಪಿಯು ಡಿ.ಎಲ್ ಹೊಂದಿದ್ದರಿಂದ, ತಾನೇ ವಾಹನ ಚಾಲನೆ ಮಾಡುತ್ತಿದ್ದುದಾಗಿ ಹೇಳಿ ನ್ಯಾಯಾಲಯದಲ್ಲಿ ಜಾಮೀನು ಪಡೆದುಕೊಂಡಿರುತ್ತಾರೆ. ಸದರಿ ವಿಷಯ ತನಿಖೆಯಲ್ಲಿ ಕಂಡು ಬಂದಿದ್ದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ 2 ನೇ ಆರೋಪಿಯ ಮೇಲೆ ಕಲಂ 202, 203, 205, 109, 419 ಹಾಗೂ 114 ಭಾ.ದಂ.ಸಹಿತೆ ರೀತ್ಯಾ ಹೆಚ್ಚುವರಿ ಕಲಂ ಸೇರಿಸಿ, ಅಂತಿಮ ವರದಿ ಸಲ್ಲಿಸಿರುತ್ತೇನೆ.
13. ಸಾಕ್ಷಿ ಇಂಡಿಮ್ನಿಟಿ ಬಾಂಡನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ - 2(ಬಿ) ಎಂದು ಗುರುತಿಸಲಾಯಿತು.

14. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ -3(ಬಿ) ಎಂದು ಗುರುತಿಸಲಾಯಿತು.

15. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ -4(ಬಿ) ಎಂದು ಗುರುತಿಸಲಾಯಿತು.

16. ಸಾಕ್ಷಿ ಅಮಾನತು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ -5(ಬಿ) ಎಂದು ಗುರುತಿಸಲಾಯಿತು.

17. ಸಾಕ್ಷಿ ಎರಡು 41 ಎ ನೊಟೀಸುಗಳನ್ನುನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ - 8 ಮತ್ತು 9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ -8(ಎ) ಮತ್ತ 9(ಎ) ಎಂದು ಗುರುತಿಸಲಾಯಿತು.

18. ಸಾಕ್ಷಿ ಎರಡು 133 ನೊಟೀಸುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ - 10 ಮತ್ತು 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು.

19. ಸಾಕ್ಷಿ ಎರಡು 133 ನೊಟೀಸಿನ ಉತ್ತರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ - 12 ಮತ್ತು 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು.

20. ಸಾಕ್ಷಿ ಐಎಂವಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 14 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ -14(ಎ) ಎಂದು ಗುರುತಿಸಲಾಯಿತು.

21. ಸಾಕ್ಷಿ ಆರ್.ಎಫ್.ಎಸ್.ಎಲ್ ಮೈಸೂರು ರವರಿಗೆ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ -15(ಎ) ಎಂದು ಗುರುತಿಸಲಾಯಿತು.

22. ಸಾಕ್ಷಿ ಆರ್.ಎಫ್.ಎಸ್.ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ -16(ಎ) ಎಂದು ಗುರುತಿಸಲಾಯಿತು.

23. ಸಾಕ್ಷಿ ಪಿ.ಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 17 ಎಂದು ಗುರುತಿಸಿಸಲಾಯಿತು.

24. ಸಾಕ್ಷಿ ಪಿರಿಯಾಪಟ್ಟಣ ಆಸ್ಪತ್ರೆಗೆ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ -18(ಎ) ಎಂದು ಗುರುತಿಸಲಾಯಿತು.

25. ಸಾಕ್ಷಿ ಎಂ.ಎಲ್.ಸಿ ಎಕ್ಸ್‌ಟ್ರಾಕ್ಟ್ ನೋಡಿ ಗುರುತಿಸಿದ್ದು, ಅದನ್ನು ನಿಪಿ - 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ -19(ಎ) ಎಂದು ಗುರುತಿಸಲಾಯಿತು.

26. ಸಾಕ್ಷಿ ಮೈಸೂರಿನ ಕೆ.ಆರ್.ಆಸ್ಪತ್ರೆಯ ಎಂ.ಎಲ್.ಸಿ ಎಕ್ಸ್‌ಟ್ರಾಕ್ಟ್ ನೋಡಿ ಗುರುತಿಸಿದ್ದು, ಅದನ್ನು ನಿಪಿ -20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

27. ಸಾಕ್ಷಿ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯ ಎಂ.ಎಲ್.ಸಿ ಎಕ್ಸ್‌ಟ್ರಾಕ್ಟ್ ನೋಡಿ ಗುರುತಿಸಿದ್ದು, ಅದನ್ನು ನಿಪಿ -21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

28. ಸಾಕ್ಷಿ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯ ಒಳರೋಗಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ -22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

29. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

1. ನಾನು ಚಾಸಾ-29 ರವರಿಂದ ಯಾವುದೇ ಕಡತವನ್ನು ಸ್ವಿಕರಿಸಿಲ್ಲ ಎಂದರೆ ಸರಿಯಲ್ಲ.
2. ದೂರಿನಲ್ಲಿ ಇಂತಹವರೇ ವಾಹನ ಓಡಿಸುತ್ತಿದ್ದರು ಎಂದು ನಮೂದಿಸಿಲ್ಲ ಎಂದರೆ, ಸರಿ.
3. ಸದರಿ ದೂರಿನಲ್ಲಿ ದಿಃ 26.08.2019 ರಂದು ಅಪಘಾತವಾಗಿದೆ ಎಂದು ಬರೆದಿದ್ದಾರೆ ಎಂದರೆ ಸರಿ. ಪ್ರ.ವ.ವರದಿಯನ್ನು ದಿಃ27.08.2019 ರಂದು ಮಾಡಲಾಗಿದೆ ಎಂದರೆ ಸರಿ. ಪ್ರ.ವ.ವರದಿಯಲ್ಲಿ ಆರೋಪಿತರ ಹೆಸರು ಇರುವುದಿಲ್ಲ ಎಂದರೆ ಸರಿ.
4. ಸತ್ಯಗಾಲ ಬಿ ಕಾವಲು ಹಾಗೂ ಪಂಚವಳ್ಳಿ ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ಆ ಕಾರಣಕ್ಕೆ ಸದರಿ ಗ್ರಾಮಸ್ಥರಿಗೆ ಒಬ್ಬರಿಗೊಬ್ಬರ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ.
5. ಸಂಜೆ ಸಮಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಜನರು ಮನೆಗಳಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.
6. ಪ್ರ.ವ.ವರದಿ ದಾಖಲಾದ ಪುರಂಭದಲ್ಲ ಸ್ಥಳ ಪರೀಶಿಲನೆ ಮಾಡಿದ್ದೀರಾ ಎಂದರೆ, ಮಾಡಿದ್ದೇನೆ. ಆ ಸಮಯದಲ್ಲಿ ಆರೋಪಿತ ಅಪಘಾತವನ್ನು ನೋಡಿದವರ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂದರೆ, ಮೃತನ ಮಗ ಚಂದು ಹಾಗೂ ಮಹಾದೇವ ಬೋವಿ ರವರ ಹೇಳಿಕೆ ಹಾಗೂ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ.
7. ನಿಪಿ - 20 ರ ಎಂ.ಎಲ್.ಸಿ ದಾಖಲೆ 1 ನೇ ಆರೋಪಿಗೆ ಸಂಬಂಧಪಟ್ಟ ದಾಖಲೆ ಎಂದರೆ ಸರಿ.
8. ನಿಪಿ-21 ರಲ್ಲಿ ಪಂಚವಳ್ಳಿ - ಪಿರಿಯಾಪಟ್ಟಣ ದಾರಿಯಲ್ಲಿ ಹಿಂಬದಿ ಸವಾರನಾಗಿ ಹೋಗುವಾಗ ಬಿದ್ದು ಏಟಾಗಿ, ರಮೇಶ ಎಂಬುವವರು 1 ನೇ ಆರೋಪಿಯನ್ನು ಆಸ್ಪತ್ರೆಗೆ ಸೇರಿಸಿದ್ದಾರೆ ಎಂದು ನಮೂದು ಇದೆ ಎಂದರೆ, ಸರಿ. ಸದರಿ ರಮೇಶರವರನ್ನು ಸಾಕ್ಷಿಯಾಗಿ ಮಾಡಿಲ್ಲ ಎಂದರೆ, ಅವರು ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದರಿಂದ ಮಾಡಿಲ್ಲ ಎಂದು ನುಡಿಯುತ್ತಾರೆ.
9. ನಿಪಿ - 20 ರ ಪ್ರಕಾರ ಸದರಿ ಗಾಯಾಳುವಿನ ಹೇಳಿಕೆ ಪಡೆದು ತನಿಖೆ ಮಾಡಲು ತೊಂದರೆ ಇತ್ತಾ

ಎಂದರೆ, ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದ ಕಾರಣ, ಸದರಿ ದಾಖಲೆಯನ್ನು ತನಿಖೆ ವೇಳೆ ನಾವೇ ಪಡೆದುಕೊಂಡಿದ್ದೇವೆ ಎಂದು ನುಡಿಯುತ್ತಾರೆ.

10. ಆ ಸಂಬಂಧ ಅವರು ದೂರು ನೀಡಿದ್ದರೂ ನೀವು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

11. 1 ನೇ ಆರೋಪಿ ಯಾವ ದಾಖಲೆ ಸೃಷ್ಠಿ ಮಾಡಿದ್ದಾರೆ ಎಂದು ಅಂತಿಮ ವರದಿಯಲ್ಲಿ ತಿಳಿಸಿದ್ದೀರಾ ಎಂದರೆ, ಇಲ್ಲ.

12. 2 ನೇ ಆರೋಪಿ ಓಡಿಸುತ್ತಿರುವ ಬೈಕಿನಲ್ಲಿ ಹಿಂಬದಿ ಸವಾರನಾಗಿದ್ದ 1 ನೇ ಆರೋಪಿ ಜಾರಿ ಬಿದ್ದು ಅಪಘಾತವಾಗಿತ್ತು ಎಂದರೆ ಸರಿಯಲ್ಲ.

13. ಚಾಸಾ - 1 ರವರಿಗೆ ವಿಮಾ ಪರಿಹಾರ ಪಡೆಯಲು ಸಹಕರಿಸುವಂತೆ 1 ನೇ ಆರೋಪಿಯ ಮೇಲೆ ನೀವು ಒತ್ತಡ ಹೇರಿರುತ್ತೀರಾ ಎಂದರೆ ಸರಿಯಲ್ಲ. ಅದರ ಸಲುವಾಗಿ 2 ನೇ ಆರೋಪಿ ಬಂದು ನ್ಯಾಯಾಲಯದ ಮುಂದೆ ಜಾಮೀನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

14. ಸ್ಥಳ ಮಹಜರ್ ಮಾಡಿದ ಬಗ್ಗೆ ಪೋಟೋ ಅಥವಾ ವಿಡಿಯೋಗಳನ್ನು ಹಾಜರುಪಡಿಸಿಲ್ಲ ಎಂದರೆ, ಸರಿ.

15. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಹಾಗೂ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಅಮಾನತು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

16. ನಾನು ಯಾವುದೇ ಠಾಣೆಯಲ್ಲಿ ಕುಳಿತುಕೊಂಡು ಮಹಜರ್ ಹಾಗೂ ಕಚ್ಚಾ ನಕಾಶೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

17. ನಿಪಿ - 20 ಹಾಗೂ 21 ರ ಪ್ರಕಾರ ಎರಡೂ ದ್ವಿಚಕ್ರ ವಾಹನಗಳ ಮೇಲೆ ತನಿಖೆ ಮಾಡಿಲ್ಲ ಎಂದರೆ, ಸರಿಯಲ್ಲ.

18. ಆರೋಪಿಗಳಿಂದ ಆರೋಪಿತ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

19. ಆಗಸ್ಟ್ ತಿಂಗಳಲ್ಲಿ ಅತೀಯಾದ ಮಳೆಯಾಗಿ ರಸ್ತೆಯಲ್ಲಿ ಜಾರುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಂಚವಳ್ಳಿ ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತಿದ್ದರೆ ಎಂದರೆ ಸರಿಯಲ್ಲ. ಆ ರಸ್ತೆಯಲ್ಲಿ ಜಾರಿ ಬಿದ್ದು ಮೃತ ಸುರೇಶರವರು ಗಾಯಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

20. ನೀವು ಅಪೂರ್ಣವಾದ ಅಂತಿಮ ವರದಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

21. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

22. ನಾನು ಈ ಪ್ರಕರಣಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

23. ನಿಪಿ - 20 ರಲ್ಲಿರುವ ರಮೇಶರವರನ್ನು ಸಾಕ್ಷಿದಾರರಾಗಿ ಮಾಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಅವರನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ.

24. ಈ ಪ್ರಕರಣದ ಅಪಘಾತಕ್ಕೆ ಹಾಗೂ ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.
25. ಈ ಪ್ರಕರಣದಲ್ಲಿ 1 ನೇ ಆರೋಪಿಯೇ ವಾಹನದ ಚಲಾಯಿಸುತ್ತಿದ್ದ ಬಗ್ಗೆ ಯಾವುದೇ ದಾಖಲೆ ಅಥವಾ ಸಾಕ್ಷಿ ಇಲ್ಲ ಎಂದರೆ ಸರಿಯಲ್ಲ.
26. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.
27. ಫಿರ್ಯದುದಾರರಿಗೆ ಅನುಕೂಲವಾಗಲಿ ಎಂದು, ಆರೋಪಿತರ ವಿರುದ್ದ ಯಾವುದೇ ಆರೋಪ ಸಾಬಿತಾಗದೇ ಇದ್ದರೂ ಸಹ ಆರೋತರ ವಿರುದ್ದ ಸುಳ್ಳು ದೋಷಾರೋಪಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಪಿರಿಯಾಪಟ್ಟಣ.